

ತಾನು ಲಿಪಿಕಾರನಷ್ಟೇ ಎಂದಿದ್ದಾನೆ. ತಾನು ಹೇಳಿದ ಕಥನ ಬರಿಯ ತುಳಸಿಯ ತೀರ್ಥದಂತೆ, ಅಲ್ಲಿರುವುದು ಧರ್ಮವಿಚಾರ ಮಾತ್ರ ಎಂದಿದ್ದಾನೆ. ಇಲ್ಲಿ ಧರ್ಮವೆಂದರೆ ಅವನು ಜೀವನದಲ್ಲಿ ಅನುಸರಿಸಿದ ಮತ ಧರ್ಮ ಎಂಬ ಸಾಮಾನ್ಯ ಅರ್ಥಕ್ಕಿಂತ, ಕಾವ್ಯದಲ್ಲಿ ಆತ ಮೇಲಿಂದ ಮೇಲೆ ಪ್ರತಿಪಾದಿಸುವ ಮನುಷ್ಯ ಧರ್ಮ ಎಂದು ತಿಳಿಯುವುದೇ ಹೆಚ್ಚು ಸೂಕ್ತ. ಈ ಕಾರಣಗಳಿಂದಾಗಿಯೇ ನಾಡಿನ ಜನ ಕರ್ಣಾಟ ಭಾರತ ಕಥಾಮಂಜರಿಯನ್ನು ತಮ್ಮ ಬದುಕಿನ ತತ್ತ್ವಪದವನ್ನಾಗಿ ಸ್ವೀಕರಿಸಿಬಿಟ್ಟರು. ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಪಠ್ಯಗಳಲ್ಲಿ, ಉತ್ತರ ಕರ್ನಾಟಕದ ಬಯಲಾಟಗಳಲ್ಲಿ ಕುಮಾರವ್ಯಾಸನ ಪದ್ಯಗಳು ಸೇರಿಹೋದವು. ಅದಲ್ಲದೆ ಗ್ರಾಮಗಳಲ್ಲಿಯ ಪ್ರಾಥಮಿಕ ಶಾಲಾ ಅಧ್ಯಾಪಕರು ಕುಮಾರವ್ಯಾಸನನ್ನು ವಾರಕ್ಕೊಮ್ಮೆ, ಪಕ್ಷಕ್ಕೊಮ್ಮೆ ಓದುವಂತಾಗಿ, ಅಕ್ಷರ ಬಾರದವರ ಬಾಯಲ್ಲಿ ಆತನ ಪದ್ಯಗಳು ಪುನರಾವರ್ತನೆಯಾಗುವಂತಾದವು. ಕುಮಾರವ್ಯಾಸನು ತನ್ನ ಕೃತಿಯಲ್ಲಿ ಹೇಳುವುದನ್ನೆಲ್ಲಾ ಹೇಳಿದ; ಆದರೆ ಆತ ಹೇಳದೇ ಬಿಟ್ಟದ್ದು ಎಂದರೆ ತನ್ನ ಹೆಸರು, ಜಾತಿ, ಕುಲಗೋತ್ರ, ಊರುಕೇರಿಯನ್ನು!

★★★

ದ್ರೌಪದಿಯ ವಸ್ತ್ರಾಪಹರಣ ಪ್ರಸಂಗ ಮಹಾಭಾರತದಲ್ಲೊಂದು ವಿಷಮ ವಿಚಿತ್ರ ಸನ್ನಿವೇಶ. ಸ್ತ್ರೀಯರನ್ನು ಕುರಿತಾದ ಹಿಂಸೆ, ಅವರ ಬದುಕಿನ ಸಂಕಷ್ಟಗಳು, ಅಗ್ನಿಪ್ರವೇಶದಂತಹ ಸಂಗತಿಗಳು ಇತಿಹಾಸದಲ್ಲಿ ದಾಖಲಾಗಿರುವಂತೆಯೇ ಸಾಹಿತ್ಯ ಕೃತಿಗಳಲ್ಲೂ ಬಿಂಬಿಸಲ್ಪಟ್ಟಿರುತ್ತದೆ. ಇದೆಲ್ಲದರ ಸಂಕೇತವಾಗಿಯೇ ವ್ಯಾಸರು ಪರಸ್ಪರ ದಾಯಾದಿಗಳು ಕುತಂತ್ರದ ಜೂಜಿನಲ್ಲಿ ಸೋತು, ಗೆದ್ದು ಅದರ ನಡುವೆ ಸ್ತ್ರೀಯೊಬ್ಬಳನ್ನು ತಂದು ನಿಲ್ಲಿಸಿ, ಆಕೆಯನ್ನು ಬೆತ್ತಲೆಗೊಳಿಸಬೇಕೆಂಬ ಪ್ರಯತ್ನವು; ಶತಶತಮಾನಗಳಲ್ಲಿ ಸ್ತ್ರೀ ಮಾನಹಾನಿಯ, ದೌರ್ಜನ್ಯದ ಅನಾದಿ ಮತ್ತು ಪ್ರಸ್ತುತದ ಸಂಕೇತ ಕಥನವಾಗಿರುತ್ತದೆ.

ಸ್ತ್ರೀ ಪರಾಧೀನಳು ಎಂಬ ಸಂಗತಿಯನ್ನು ಆಕೆಯ ಕೌಟುಂಬಿಕ ಸ್ಥಿತಿಯ ಆರಂಭದಿಂದ ಅಂತ್ಯದವರೆಗಿನ ಬದುಕಿನ ಕ್ರಮದಲ್ಲಿ ಬಿಂಬಿಸಲಾಗಿರುತ್ತದೆ. ಪರಾಧೀನೆ ಎನ್ನುವುದಾದರೆ ಅಧೀನಗೊಳಿಸಿಕೊಂಡವರು ಆಕೆಯನ್ನು ರಕ್ಷಿಸಬೇಕಾದ ಸಂಗತಿಯು ಅಲ್ಲಿ ಇದ್ದೇ ಇದೆ. ಆದರೆ ಆಕೆಯನ್ನು ಎಷ್ಟರ ಮಟ್ಟಿಗೆ ರಕ್ಷಿಸಲಾಯಿತು ಎಂಬ ಪ್ರಶ್ನೆಯನ್ನು ದ್ರೌಪದಿ ಎಲ್ಲರೆದುರು ತನ್ನ ಮಾನಹರಣವಾಗುತ್ತಿರುವಾಗ ಕೇಳುತ್ತಾಳೆ. ಪುರುಷ ಸಮೂಹದೆದುರು ಈ ಪ್ರಶ್ನೆ ಹಾಕುವಲ್ಲಿ